ಮೂಲ ದಾವಾ ನಂಃ 57/2019

ಪಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **11.09.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್.ಎಸ್. ಬಿ 14 ರಿಂದ 23 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಈರನಗೌಡ ಚೆನ್ನವೀರಗೌಡ ಪಾಟೀಲರವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿಯವರು ದಿನಾಂಕಃ 26.03.1963 ರಂದು ಬಾಚನಕಿ ಗ್ರಾಮದಲ್ಲಿ ತೀರಿಕೊಂಡಿರುತ್ತಾರೆ ಎಂದರೆ, ಅವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕಃ 25.04.1963 ರಂದು ಅವರ ವಾರಿಸಾ ಆಗಿರುತ್ತದೆ ಎಂದರೆ , ಅವರ ವಾರಿಸಾ ಆಗಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಾರಿಸಾ ಎಂಟ್ರಿ 1131 ಎಂದು ದಾಖಲಾಗಿರುತ್ತದೆ ಎಂದರೆ , ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಂದಾನಿ ವೀರನಗೌಡ ಪಾಟೀಲರವರು ತಾನು ಈರನಗೌಡ ಚೆನ್ನವೀರ ಗೌಡ ಪಾಟೀಲರವರ ವಾರಿಸುದಾರ ಎಂದು ದಾಖಲಾಗಿದೆ ಎಂದರೆ , ಅವರು ನಮಗೆ ತಿಳಿಯದಂತೆ ದಾಖಲು ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯತ್ತಾರೆ. ಸುಮಾರು 28 ಸರ್ವೇ ನಂಬರಗಳಿಗೆ ಅವರು ವಾರಿಸುದಾರರೆಂದು ದಾಖಲಾಗಿದೆ ಎಂದರೆ , ಅವರು ನಮಗೆ ತಿಳಿಯದಂತೆ ದಾಖಲು ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯತ್ತಾರೆ. ಅಂದಾನೆಪ್ಪರವರಿಗೆ ವಾರಿಸಾ ಮೂಲಕ ಬಂದ ಎರಡು ಆಸ್ತಿಗಳನ್ನು ದಿನಾಂಕಃ 26.07.1965 ರಂದು ಶ್ರೀ ಚೆನ್ನಬಸಪ್ಪ ಈರಪ್ಪ ಕೊಂಡಿಕೊಪ್ಪ ರವರಿಗೆ ನೋಂದಾಯಿತ ದಸ್ತಾವೇಜಿನ ಮೂಲಕ ಮರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆದ ಕಾರಣ ನಾನು ಈ ದಾವೆಯಲ್ಲಿ ದಾವಾಸ್ತಿಗಳನ್ನಾಗಿ ಕಾಣಿಸಿದ ಆಸ್ತಿಗಳನ್ನು 14 ರಿಂದ 23 ನೇ ಪ್ರತಿವಾದಿಯರ ಹಿಂದಿನವರಾದ ಶ್ರೀ ಚೆನ್ನಬಸಪ್ಪ ಈರಪ್ಪ ಕೊಂಡಿಕೊಪ್ಪ ರವರು ಖರೀದಿ ಮಾಡಿದ ಆಸ್ತಿಗಳಾಗಿರುತ್ತವೆ ಎಂದರೆ , ಸಾಕ್ಷಿಯು ನಾವು ಅವರಿಗೆ ಖರೀದಿಗೆ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾಸ್ತಿಗಳು ನಮ್ಮ ಕುಟುಂಬದ ಆಸ್ತಿಗಳು ಆಗಿರದೇ ಇದ್ದರೂ ಸಹಿತ ಅವು ನಮ್ಮ ಕುಟುಂಬದ ಆಸ್ತಿಗಳು ಎಂದು ಹೇಳಿ, ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ತಿಗಳ ಮೇಲೆ ನಮಗಾಗಲೀ ಅಥವಾ 2 ರಿಂದ 13 ನೇ ಪ್ರತಿವಾದಿಯರಿಗಾಗಲೀ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಗಳು ನಮ್ಮ ಕುಟುಂಬದ ಆಸ್ತಿಗಳು ಆಗಿರದೇ ಇದ್ದರೂ ಸಹಿತ, 14 ರಿಂದ 23 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ದಾಖಲು ಮಾಡಿದ ಕಾರಣ , 14 ರಿಂದ 23 ನೇ ಪ್ರತಿವಾದಿಯರಿಗೆ ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಲುಕ್ಸಾನು ಸಂಭವಿಸಿದೆ ಎಂದರೆ ಸರಿಯಲ್ಲ. ಸದರಿ ಲುಕ್ಸಾನನ್ನು ಅವರು ನಮ್ಮಿಂದ ಕಾನೂನುಬದ್ಧವಾಗಿ ವಸೂಲಿ ಮಾಡಲು ಬದ್ಧರಾಗಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು 14 ರಿಂದ 23 ನೇ ಪ್ರತಿವಾದಿಯರ ವಿರುದ್ಧ ಸಲ್ಲಿಸಲು ನನಗೆ ಯಾವುದೇ ದಾವಾ ಕಾರಣ ಉದ್ಭವಿಸಿರುವುದಿಲ್ಲವೆಂದರೆ , ಮಾಹಿತಿಯನ್ನು ತಿಳಿದುಕೊಂಡೇ ಈ ದಾವೆಯನ್ನು ದಾಖಲು ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ

. Sd/-

**ಸಿವಿಲ್ ಜಡ್ಜ, ಮುಂಡಗೋಡ.**